# ॥ ಉಪಮಾ ರಾಮಕೃಷ್ಣಸ್ಯ ॥

ಸ್ವಾಮಿ ಅಮೃತಾನಂದ

ಶ್ರೀರಾಮಕೃಷ್ಣರ ವಚನಗಳು ಕೇವಲ ಆಧ್ಯಾತ್ಮಿಕ ವಿಚಾರಗಳಿಂದ ಕೂಡಿರುವುದು ಮಾತ್ರವಲ್ಲದೆ ಕಾವ್ಯಮಯವೂ ಆಗಿವೆ. ದೈನಂದಿನ ಉದಾಹರಣೆಗಳ ಮೂಲಕ ಅತಿ ಗಂಭೀರವಾದ ಧಾರ್ಮಿಕ ವಿಚಾರಗಳನ್ನು ಅವರು ವಿವರಿಸುವ ರೀತಿ ಅನನುಕರಣೀಯವಾದುದು. ಅಂತಹ ಒಂದು ಉದಾಹರಣೆಯನ್ನು ತೆಗೆದುಕೊಂಡು ವಿಶ್ಲೇಷಿಸಿದ್ದಾರೆ ವಿಶಾಖಪಟ್ಟಣದಲ್ಲಿರುವ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಅಮೃತಾನಂದರು.

### ಭಾಗವತದ ಮಹಿಮೆ

**ಶ್ರೀಮದ್ಭಾಗವತ** ವ್ಯಾಸರಚಿತ. ಕಥಾವಸ್ತುವು ಶ್ರೀಮನ್ನಾರಾಯಣನೇ ನಾರದನಿಗೆ ಹೇಳಿದ್ದೆಂದು ವ್ಯಾಖ್ಯಾನಕಾರರಾದ ಶ್ರೀಧರಸ್ವಾಮಿಗಳು ತಿಳಿಸಿದ್ದಾರೆ. ಆದರೂ ಕಥಾವಸ್ತುವನ್ನು ವ್ಯಕ್ತಪಡಿಸುವ ಭಾಷೆ ವ್ಯಾಸರದೇ ಆಗಿರಬೇಕು. ಇದು ಅಧ್ಯಾತ್ಮ ರಾಮಾಯಣದ ಹಾಗೆ ಜ್ಞಾನಭಕ್ತಿಗಳ ಸಮನ್ವಯ. ಸಾಧಕರಿಗೆ ಶ್ರೇಷ್ಠವಾದ ಮಾರ್ಗದರ್ಶಕ ಗ್ರಂಥ.

ಇದನ್ನು ಶ್ರೀರಾಮಕೃಷ್ಣ ಪರಮಹಂಸರು ಜಿಲೇಬಿಗೆ ಹೋಲಿಸಿದ್ದಾರೆ. ಅವರ ಊರಾದ ಕಾಮಾರ್‌ಪುಕುರ್ ಜಿಲೇಬಿಗೆ ಹೆಸರುವಾಸಿಯಾದದ್ದು. ಆ ರೀತಿಯ ಜಿಲೇಬಿ ಬೇರೆಲ್ಲೂ ಸಿಗುವುದಿಲ್ಲ. ಅದು ಆಕಾರದಲ್ಲಿ ದೊಡ್ಡದು, ಮೃದು. ರುಚಿಯಲ್ಲಿ ಮಧುರ. ರಸದಿಂದ ತುಂಬಿದ್ದು. ಶ್ರೀರಾಮಕೃಷ್ಣರು ಹಲವಾರು ಕಡೆ ಈ ಜಿಲೇಬಿ ದೃಷ್ಟಾಂತವನ್ನು ಕೊಟ್ಟಿದ್ದಾರೆ. ಅದು ಹಾಗಿರಲಿ.

ವ್ಯಾಸರಚಿತವಾದ ಗ್ರಂಥದ ಮೊದಲಲ್ಲಿ ಕೊಟ್ಟಿರುವ ಮೂರನೆಯ ಮಂಗಳ ಶ್ಲೋಕ ಈ ರೀತಿ ಇದೆ :

**ನಿಗಮಕಲ್ಪತರೋರ್ಗಲಿತಂ ಫಲಂ**
**ಶುಕಮುಖಾದಮೃತದ್ರವಸಂಯುತಮ್ ।**
**ಪಿಬತ ಭಾಗವತಂ ರಸಮಾಲಯಂ**
**ಮುಹುರಹೋ ರಸಿಕಾಃ ಭುವಿ ಭಾವುಕಾಃ॥**

ಅಂದರೆ, ರಸಿಕರೇ, ಭಾವುಕರೇ (ರಸವಿಶೇಷಜ್ಞರೇ ಎನ್ನುತ್ತಾರೆ ಶ್ರೀಧರಸ್ವಾಮಿಗಳು) ಬನ್ನಿ, ಭಾಗವತ ಎನ್ನುವ ರಸವನ್ನು ಪಾನಮಾಡಿ. ಬಾರಿ ಬಾರಿಗೆ ಅಂದರೆ ಮುಕ್ತಿಯಲ್ಲೂ ಪಾನಮಾಡಿ. ಈ ರಸ ಸಾಧಾರಣವಾದದ್ದಲ್ಲ. ವೇದವೆನ್ನುವ ಕಲ್ಪವೃಕ್ಷದಲ್ಲಿ ಬಿಟ್ಟ, ಚೆನ್ನಾಗಿ ಮಾಗಿರುವ ಹಣ್ಣು. ಗಿಡದಿಂದ ಕೆಳಗೆ ಬೀಳುವುದರಲ್ಲಿದೆ. ಗಿಳಿ (ಶುಕ) ಸವಿನೋಡಿದ ಹಣ್ಣು. ಅಂದರೆ ಇದು ಸಿಹಿ ಎನ್ನುವುದರಲ್ಲಿ ಸಂದೇಹವೇ ಇಲ್ಲ. ಅರ್ಥಾತ್ ಶುಕರು ಭಾಗವತವನ್ನು ಸವಿನೋಡಿ ಇದು ಅಮೃತ ಎಂದು ಹೇಳಿ ಜಗತ್ತಿಗೆ ಪ್ರದಾನ ಮಾಡಿದ್ದಾರೆ. ಹೀಗೆಲ್ಲಾ ಹೇಳಿ ವ್ಯಾಸರು ನಮ್ಮನ್ನು ಹುರಿದುಂಬಿಸುತ್ತಿದ್ದಾರೆ.

### ಭಾಗವತವೆಂಬ ಫಲ

ಈಗ ಈ ಶ್ಲೋಕದಲ್ಲಿ ವ್ಯಾಸರು ಭಾಗವತವನ್ನು ಫಲ (ಹಣ್ಣು) ಎಂದು ಶುರು ಮಾಡಿದ್ದಾರೆ. ನನ್ನಂತಹವರಿಗೆ ಒಂದು ಸಂದೇಹ : ಹಣ್ಣು ತಿನ್ನುತ್ತಾರಲ್ಲಾ, ಕುಡಿಯುವುದಿಲ್ಲ. ಆದರೆ ವ್ಯಾಸರ ಭಾಷೆಯಲ್ಲಿ ಕುಡಿಯಿರಿ ಎಂದು ಇದೆ. ಇದರಿಂದ ನನಗೆ ಅರ್ಥವಾಗಿದ್ದು ಭಾಗವತ ಒಂದು ಒಳ್ಳೆಯ ಸಿಹಿ ಹಣ್ಣು. ಆದ್ದರಿಂದ ಈ ಹಣ್ಣನ್ನು ತಿಂದು ರಸವನ್ನು ಹೀರಿ ಕುಡಿಯಿರಿ ಎಂದಾಯಿತು. ಹಾಗಾದರೆ ಇನ್ನೊಂದು ಸಂದೇಹ ಬರುತ್ತದೆ. ಯಾವುದೇ ಹಣ್ಣಾಗಲಿ ಅದರಲ್ಲಿ ಸಿಪ್ಪೆ ಇದ್ದೇ ಇರುತ್ತವೆ. ಅವುಗಳನ್ನು ತೆಗೆದು ಹೊರಗೆ ಹಾಕಿ ರಸವನ್ನು ಮಾತ್ರ ಕುಡಿಯಿರಿ ಎಂದಾಯಿತು. ಆಗ ಇನ್ನೊಂದು ಸಂದೇಹ: ಭಾಗವತ ಉತ್ತಮವಾದ ಭಕ್ತಿಬೋಧಕ ಗ್ರಂಥ. ಇದರಲ್ಲಿ ಹೇಯವಾಗಲೀ ತ್ಯಾಜ್ಯವಾಗಲೀ ಇರಬಾರದು. ಇದು ಅಮೃತರಸ. ಇದನ್ನು ಹಾಗೆಯೇ ಪಾನ ಮಾಡಬೇಕು. ಆದರೆ ಯಾವ ರಸವಾದರೂ ಪಾತ್ರೆಯಿಲ್ಲದೆ ಇರಲಾರದು. ಆದ್ದರಿಂದಲೇ ವ್ಯಾಸರು ಹಣ್ಣು ಎಂದು ಹೇಳಿದ್ದು. ಸಿಪ್ಪೆ ಹಣ್ಣಿನ ತಿರುಳಿಗೆ ಆಶಯದಂತಿರುತ್ತದೆ. ಸರಿ. ಭಾಗವತ ಎನ್ನುವ ಹಣ್ಣಿನಲ್ಲಿ ಯಾವುದನ್ನು ತೆಗೆದುಹಾಕೋಣ. ಇದು ಸಾತ್ತ್ವಿಕ ಧರ್ಮಕ್ಕೇ ಅಪಚಾರ. ಶ್ರೀಧರಸ್ವಾಮಿಗಳು ವ್ಯಾಸರು ಹೇಳಿದ ಹಣ್ಣೇ ರಸ, ರಸವೇ ಹಣ್ಣು ಎಂದು ಒಂದು ರೀತಿಯ ಸಮಾನಾಧಿಕರಣ್ಯವನ್ನು ತೋರಿಸಿ ಸಮರ್ಥನೆ ಮಾಡಲು ಪ್ರಯತ್ನಿಸಿದ್ದಾರೆ. ಆದರೆ ನನ್ನಂತಹವರ ಸಂದೇಹ ಅಷ್ಟು ಸುಲಭವಾಗಿ ಹೋಗುವುದಿಲ್ಲ. ಈ ಸಂದರ್ಭದಲ್ಲಿ ವ್ಯಾಸರಿಗೇಕೆ, ಉಪಮಾ ಕಾಳಿದಾಸಸ್ಯ ಎಂದು ವಿಖ್ಯಾತನಾದ ಕಾಳಿದಾಸನಿಗೂ ಬೇರೆ ಉಪಮಾ ಸಿಗುವುದಿಲ್ಲವೆನ್ನಲೇಬೇಕು. ಇದನ್ನೇ ಬಹುಶಃ ಆಲಂಕಾರಿಕರು ನ ಹಿ ದೃಷ್ಟಾಂತೇ ಸರ್ವಸಾಮ್ಯಂ ಎಂದು ಒಂದು ರೀತಿ ಸುಧಾರಿಸುತ್ತಾರೆ.

### ಭಾಗವತ ಜಿಲೇಬಿ

ಈಗ ಶ್ರೀರಾಮಕೃಷ್ಣರು ಹೇಳಿದ ಮಾತನ್ನು ಸ್ವಲ್ಪ ಅರ್ಥ ಮಾಡಿಕೊಳ್ಳೋಣ. ಅವರು ಪಂಡಿತರಲ್ಲ, ಗ್ರಂಥಕರ್ತರಲ್ಲ. ಸಾಮಾನ್ಯ ಹಳ್ಳಿಯ ಜನ. ಸಾಕಷ್ಟು ಓದು ಬರಹವೂ ಅವರಿಗೆ ಬರುತ್ತಿರಲಿಲ್ಲ. ಅವರ ಬಾಯಿಂದ ತಾನಾಗಿಯೇ ಬಂದ ಮಾತು ಜಿಲೇಬಿ ದೃಷ್ಟಾಂತ. ಜಿಲೇಬಿಯನ್ನು ತುಪ್ಪದಲ್ಲಿ ಕರಿದು ಸಕ್ಕರೆ ಪಾಕದಲ್ಲಿ ಊರಿಡುತ್ತಾರೆ. ಜ್ಞಾನವೆನ್ನುವುದು ಬೆಂಕಿ. ಜಿಲೇಬಿಯನ್ನು ಕರಿಯಬೇಕಾದರೆ ಪ್ರಖರವಾದ ಈ ಬೆಂಕಿ ಬೇಕು. ಭಕ್ತಿ ಎನ್ನುವುದು ಸಕ್ಕರೆ ಪಾಕದಂತೆ ಮಧುರ. ಕರಿದ ಜಿಲೇಬಿಯನ್ನೇ ಸಕ್ಕರೆ ಪಾಕ ದಲ್ಲಿಡಬೇಕು. ಹಾಗೆಯೇ ಇಟ್ಟರೆ ಜಿಲೇಬಿ ಸಕ್ಕರೆ ಪಾಕವನ್ನು ಹೀರು ವುದಿಲ್ಲ. ಅದು ರಸವನ್ನು ಹೀರಿ ಮೃದುವಾಗದಿದ್ದರೆ ತಿನ್ನಲಾಗು ವುದಿಲ್ಲ. ಆದ್ದರಿಂದ ಜಿಲೇಬಿಗೆ ಬೆಂಕಿಯ ಉರಿ ಎಷ್ಟು ಮುಖ್ಯವೋ ಸಕ್ಕರೆ ಪಾಕ ಅಷ್ಟೇ ಮುಖ್ಯ. ಹಾಗೆಯೇ ಭಾಗವತ ಜ್ಞಾನ ಭಕ್ತಿಗಳ ಸಮನ್ವಯ ಗ್ರಂಥ. ಎಂದರೆ, ಭಾಗವತಕ್ಕೆ ಎರಡೂ ಮುಖ್ಯ. ಪ್ರಖರವಾದ ಜ್ಞಾನ, ಶೀತಲವಾದ ಭಕ್ತಿ ಎರಡೂ ಕಲೆತರೆ ಭಾಗವತ.

### ಹಣ್ಣಿಗಿಂತ ಜಿಲೇಬಿಯೇ ಉತ್ತಮ ಉಪಮೆ

ಭಾಗವತವನ್ನು ಹಣ್ಣು ಎಂದು ಹೇಳಿದರೆ ಬರುವ ಸಂದೇಹ ಜಿಲೇಬಿ ಎಂದು ಹೇಳಿದರೆ ಬರಲಾರದು. ಹಣ್ಣಿನಲ್ಲಿರುವಂತೆ ಜಿಲೇಬಿ ಯಲ್ಲಿ ತ್ಯಾಜ್ಯವಾದದ್ದು ಯಾವುದೂ ಇಲ್ಲ. ಜಿಲೇಬಿಯನ್ನು ಪೂರ್ಣವಾಗಿ ತಿಂದುಹಾಕಬಹುದು. ಇಷ್ಟೇ ಅಲ್ಲದೆ ಹಣ್ಣಿನಲ್ಲಿ ಬೀಜಗಳಿರುತ್ತವೆ. ಆ ಬೀಜ ಮುಂದೆ ಮರವಾಗಿ ಬೆಳೆಯುತ್ತವೆ. ಭಾಗವತವನ್ನು ಹಣ್ಣಿಗೆ ಹೋಲಿಸಿದಾಗ ಅದರಲ್ಲಿ ಪುನರ್ಜನ್ಮದ ಬೀಜ ಇನ್ನೂ ಉಳಿದಿರಬಹುದೆಂಬ ಸಂದೇಹ ಮನಸ್ಸಿಗೆ ಬರುತ್ತದೆ. ಆದರೆ ಜಿಲೇಬಿಯ ವಿಷಯದಲ್ಲಿ ಆ ಸಂದೇಹಕ್ಕೆ ಅವಕಾಶವಿಲ್ಲ.

ಶ್ರೀರಾಮಕೃಷ್ಣರು ಜಿಲೇಬಿಯನ್ನು ಗೌರ್ನರರ ಗಾಡಿಗೆ ಹೋಲಿಸುತ್ತಾರೆ. ರಸ್ತೆಯಲ್ಲಿ ಎಷ್ಟೇ ಜನಜಂಗುಳಿ ಇದ್ದರೂ ಗೌರ್ನರರ ಗಾಡಿ ಬಂದರೆ ಎಲ್ಲರೂ ಪಕ್ಕಕ್ಕೆ ಸರಿದು ಅದಕ್ಕೆ ಹೋಗಲು ಅವಕಾಶ ಮಾಡಿಕೊಡುತ್ತಾರೆ. ಹಾಗೆಯೇ ಎಷ್ಟೇ ಹೊಟ್ಟೆ ತುಂಬಿದ್ದರೂ ಜಿಲೇಬಿ ತಿನ್ನಲು ಅವಕಾಶವಿದ್ದೇ ಇರುತ್ತದೆ. ಅಂದರೆ ಜಿಲೇಬಿ ಅಷ್ಟೊಂದು ರುಚಿಕರವಾದುದರಿಂದ ಎಷ್ಟೇ ಹೊಟ್ಟೆ ತುಂಬಿದ್ದರೂ ಜಿಲೇಬಿ ಬಂದರೆ 'ಬೇಡ' ಎನ್ನುವುದ ಕ್ಕಾಗುವುದಿಲ್ಲ, ತಿನ್ನಲೇಬೇಕೆನಿಸುತ್ತದೆ.

ಭಾಗವತದ ಮಹಿಮೆಯೂ ಅಂತಹುದು. ಅದು ಎಲ್ಲರಿಗೂ ಆಸ್ವಾದ್ಯ. ಪ್ರಾಪಂಚಿಕ ವಿಷಯಗಳಿಂದ ಹೃದಯ ತುಂಬಿಹೋಗಿದ್ದರೂ ಭಾಗವತವನ್ನು ಕೇಳುವುದಕ್ಕೆ ಬೇಸರ ವೆನಿಸುವುದಿಲ್ಲ—ಅದಕ್ಕೂ ಆ ಹೃದಯದಲ್ಲಿ ಅವಕಾಶವಿರುತ್ತದೆ.

ಈಚೆಗೆ ಒಬ್ಬ ಕವಿಗಳು ಸಂಸ್ಕೃತದಲ್ಲಿ ಕಾವ್ಯರೂಪವಾಗಿ ಶ್ರೀರಾಮಕೃಷ್ಣರ ಜೀವನವನ್ನು ರಚಿಸಿದ್ದಾರೆ. ಅದರಲ್ಲಿ ಉಪಮಾ **ರಾಮಕೃಷ್ಣಸ್ಯ** ಎನ್ನುವ ಪ್ರಯೋಗವಿದೆ. ಈ ಮಾತು ಸಾರ್ಥಕ ಎಂದೆನಿಸಿತು ನನಗೆ.

## ಶ್ರೀರಾಮಕೃಷ್ಣರ ದಿವ್ಯಾನುಭವ



**ಒಂದಾನೊಂದು** ದಿನ ವಿಷ್ಣು ದೇವಾಲಯದ ಮುಂದೆ ಒಬ್ಬರು ಭಾಗವತವನ್ನು ಓದುತ್ತಿದ್ದರು. ಶ್ರೀ ರಾಮಕೃಷ್ಣರು ಅದನ್ನು ಕೇಳುತ್ತಿದ್ದರು. ಆಗ ಇದ್ದಕ್ಕಿದ್ದಂತೆ ಅವರು ಭಾವಾವಿಷ್ಟರಾದರು. ಆ ಭಾವದಲ್ಲಿ ಅವರಿಗೆ ದೇದೀಪ್ಯಮಾನವಾಗಿ ಬೆಳಗುತ್ತಿರುವ ಶ್ರೀಕೃಷ್ಣನ ದರ್ಶನವಾಯಿತು. ಆಗ ಶ್ರೀಕೃಷ್ಣನ ಪಾದಪದ್ಮಗಳಿಂದ ಬೆಳಕಿನ ಕಿರಣವೊಂದು ಹೊರಹೊಮ್ಮಿತು. ಅದು ಹರಿದು ಬಂದು ಶ್ರೀಮದ್ಭಾಗವತವನ್ನು ಮುಟ್ಟಿತು. ಮುಟ್ಟಿ ಅಷ್ಟಕ್ಕೇ ನಿಲ್ಲಲಿಲ್ಲ. ಅಲ್ಲಿಂದಲೂ ಹರಿದು ಬಂದು ಶ್ರೀ ರಾಮಕೃಷ್ಣರ ಹೃದಯವನ್ನು ಮುಟ್ಟಿತು. ಹೀಗೆಯೇ ಕೆಲ ಹೊತ್ತಿನವರೆಗೆ ಆ ಜ್ಯೋತಿಕಿರಣ ಶ್ರೀಮದ್ಭಾಗವತ ವನ್ನು, ಶ್ರೀರಾಮಕೃಷ್ಣರ ಹೃದಯವನ್ನು ಮತ್ತು ಶ್ರೀಕೃಷ್ಣನ ಪಾದಗಳನ್ನು ತ್ರಿಕೋಣಾಕೃತಿಯಲ್ಲಿ ಮುಟ್ಟಿಕೊಂಡೇ ಇತ್ತು.

ಈ ದಿವ್ಯ ದರ್ಶನದಿಂದ ಶ್ರೀರಾಮಕೃಷ್ಣರಿಗೆ ಒಂದು ವಿಷಯ ಸ್ಪಷ್ಟವಾಗಿ ಮನವರಿಕೆಯಾಯಿತು. ಏನೆಂದರೆ ಶ್ರೀಮದ್ಭಾಗವತ, ಭಕ್ತ, ಹಾಗೂ ಭಗವಂತ— ಈ ಮೂರು ಅಂಶಗಳು ಹೊರನೋಟಕ್ಕೆ ಬೇರೆ ಬೇರೆಯಾಗಿ ಕಂಡರೂ, ಶ್ರೀರಾಮಕೃಷ್ಣರು ಹೇಳುತ್ತಾರೆ, ಅವು ಮೂರೂ ಒಂದೇ. ಇನ್ನೊಂದು ರೀತಿಯಿಂದ ಹೇಳುವುದಾದರೆ ಒಂದೇ ದಿವ್ಯ ಸತ್ಯದ ಮೂರು ಅಭಿವ್ಯಕ್ತಿಗಳು ಅವುಗಳು. ಶ್ರೀರಾಮಕೃಷ್ಣರು ಹೇಳುತ್ತಿದ್ದರು : 'ಭಾಗವತ, ಭಕ್ತ, ಭಗವಾನ್—ಈ ಮೂರೂ ಒಂದೇ ಮತ್ತು ಆ ಒಂದು ವಸ್ತುವೇ ಮೂರಾಗಿ ವ್ಯಕ್ತವಾಗಿದೆ.'

"ಭಾಗವತವೆಂದರೆ ಅದು ಜ್ಞಾನವೆಂಬ ತುಪ್ಪದಲ್ಲಿ ಕರಿದು ಭಕ್ತಿಯೆಂಬ ಶರ್ಕರ ಪಾಕದಲ್ಲಿ ಅದ್ದಿದ ಸಿಹಿ ತಿಂಡಿಯಂತೆ."

—ಶ್ರೀರಾಮಕೃಷ್ಣ